ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಆ ಕಡ್ಡಿಗೆ ಜೀವ ಬರುವ ಹೊತ್ತು



'ಆ ಕಡ್ಡಿನೇ ಗಮನವಿಟ್ಟು ನೋಡ್ತಾ ಇರಿ. ಏಕಾಗ್ರತೆ ಬೇರೆ ಕಡೆ ಹೋಗಲೇಬಾರ್ದು. ಒಂದು ಕ್ಷಣದಲ್ಲಿ ಅಲ್ಲೊಂದು ಚಮತ್ಕಾರ ನಡೆಯುತ್ತೆ. ಮೊದಲ ಸಲ ನೋಡಿದಾಗ ನಾನೂ ದಿಗ್ಭ್ರಮೆಗೊಂಡಿದ್ದೆ. ಪಿಳಿಪಿಳಿ ಕಣ್ಣು ಬಿಡ್ಕೊಂಡು ಆ ಅಚ್ಚರೀನ ಸವಿದಿದ್ದೆ. ನನ್ನ ಪ್ರಕಾರ ಇದೊಂದು ದಿವ್ಯಾನುಭವ. ನೀವು ನನ್ನ ಥರ ಥ್ರಿಲ್ ಆಗ್ಬಿಟ್ಟು ಮೈ ಮರೀಬೇಡಿ. ಪಟಪಟ ಅಂತ ಶೂಟ್ ಮಾಡಿ ಒಳ್ಳೇ ಚಿತ್ರ ತೆಗೀರಿ. ಆ ಕ್ಷಣ ಯಾವಾಗ ಬೇಕಾದರೂ ಜರುಗಬಹುದು. ತಾಳ್ಮೆ ಇಟ್ಕೊಂಡು ಕಾದು ನೋಡಿದ್ರೆ ನಿರ್ಜೀವದ ಈ ಕಡ್ಡಿಗೆ ಜೀವನೇ ಬರುತ್ತೆ. ಇಂಥ ರೋಮಾಂಚನವೆಲ್ಲಾ ಅನುಭವಿಸೋದಕ್ಕೆ ಸಾಧ್ಯ ಆಗೋದೇ ಫೋಟೋಗ್ರಫಿಯಲ್ಲಿ. ಈ ಚಟ ಒಮ್ಮೆ ಅಭ್ಯಾಸವಾದ್ರೆ ಅಂಟ್ಕೊಂಡು ಬಿಡುತ್ತೆ. ನಾನು ಸುಳ್ಳುಪಳ್ಳು ಹೊಡೀತಿದ್ದೀನಿ ಅಂತ ನಿಮಗನ್ನಿಸಬಹುದು. ನಿಮ್ಮ ಸಂತೋಷ ನೋಡ್ಬೋಕೆ ನಾನು ಕಾಯ್ತಾ ಇದ್ದೀನಿ' ಎಂದು ಪಕ್ಕ ಕೂತಿದ್ದ ಅರುಣ್‌ಗೆ ಪಿಸುಮಾತಲ್ಲಿ ಹೇಳಿದೆ. ಅವರೊಮ್ಮೆ ಕಂಗಾಲಾಗಿ ನನ್ನ ನೋಡಿ ಮುಗುಳ್ನಕ್ಕರು.

ನನ್ನ ಮಾತು ಅರುಣ್‌ಗೆ ತುಸು ಒಗಟಾಗಿ ಕಂಡಿರಬೇಕು. ಅವರಿನ್ನೂ ನಂಬಿರಲಿಲ್ಲ. ನಮ್ಮ ಪಟಜಾಲದ ಬಲೆಗೆ ಬಿದ್ದು,ಸರಳ ವ್ಯಕ್ತಿತ್ವದ ಅರುಣ್ ನಮ್ಮೊಂದಿಗೆ ಬಂದಿದ್ದರು. ಎಲ್ಲಾ ಮಾತುಗಳಿಗೂ ವಿಧೇಯರಾಗಿ 'ಹ್ಞೂ ಸರ್, ಸರಿ ಸರ್' ಎನ್ನುತ್ತಿದ್ದರು. ಅರುಣ್‌ಗೆ ಫೋಟೋಗ್ರಫಿಯ ಈ ರಗಳೆಯೇ ಹೊಸತು. ಒಮ್ಮೆ ಬಾಯಿತಪ್ಪಿ 'ನಂಗೂ ಒಂದ್ಸಲ ಕರ್ಕೊಂಡು ಹೋಗಿ ಸರ್' ಎಂದು ಹೇಳಿ ನಮ್ಮ ಕಪಟಜಾಲಕ್ಕೆ ಸಿಕ್ಕಿ ಬಿದ್ದಿದ್ದರು. ಪಾಪದ ಮನುಷ್ಯನೊಬ್ಬ ಸಿಕ್ಕಿದ್ದೇ ಚಾನ್ಸ್ ಎಂದು ಕ್ಯಾಮೆರಾ ಕೊಡಿಸಿ ಜೋಳಿಗೆ ಕಟ್ಟಿದೆವು. ಈ ದಿನ ಅವರನ್ನು ಅಪಹರಿಸಿ ದೂರದ ಗೋವಾ, ಮಹಾರಾಷ್ಟ್ರ ಗಡಿಗೆ ತಂದಿದ್ದೇವೆ.